# ಆರ್ಥಿಕ ಸಚಿವಾಲಯ
# ಅಧಿಸೂಚನೆ
## ಸಂಖ್ಯೆ: ಎಫ್‌ಡಿ 876 ವೆಚ್ಚ-12/2017, ಬೆಂಗಳೂರು, ದಿನಾಂಕ: 15.09.2017

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ 29)ರ 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಎಂದರೆ:-

**1. ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ನಿಯಮಗಳು, 2017 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 27ಎ ಹೊಸ ನಿಯಮದ ಸೇರ್ಪಡೆ:-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ದಲ್ಲಿ, 27ನೇ ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

**27(ಎ): ನಿರ್ಮಾಣ ಕಾಮಗಾರಿಗಳಲ್ಲಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಟೆಂಡರ್‌ದಾರರಿಗೆ ಆದ್ಯತೆ.-** ಈ ನಿಯಮಗಳ ಉದ್ದೇಶಕ್ಕಾಗಿ, ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವ, 2ನೇ ಪ್ರಕರಣದ (ಡಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಎಲ್ಲ ಸಂಗ್ರಹಣಾ ಸಂಸ್ಥೆಗಳು ಅಧಿಸೂಚಿತ ಇಲಾಖೆಗಳಾಗಿರತಕ್ಕದ್ದು ಮತ್ತು ಅವು ಈ ಕೆಳಕಂಡ ಕಾರ್ಯವಿಧಾನಗಳನ್ನು ಅನುಸರಿಸತಕ್ಕದ್ದು, ಎಂದರೆ:-

(ಎ) 50.00 ಲಕ್ಷ ರೂಪಾಯಿಗಳನ್ನು ಮೀರದಿರುವ ಮೌಲ್ಯದ, ಪ್ರತಿಯೊಂದು ಹಣಕಾಸು ವರ್ಷದ ಕ್ರಿಯಾ ಯೋಜನೆಯಲ್ಲಿ ಅಥವಾ ಅನುಬಂಧ-ಇ ಯಲ್ಲಿ ಅನುಮೋದನೆಯಾದ ಎಲ್ಲ ಕಾಮಗಾರಿಗಳನ್ನು, ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದ ನೋಂದಾಯಿತ ಗುತ್ತಿಗೆದಾರರುಗಳ ಪೈಕಿ ಟೆಂಡರ್ ಕರೆಯಲಾದ ಈ ಕಾಮಗಾರಿಗಳ ಶೇ. 17.15ರಷ್ಟು ಮತ್ತು ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿದ ಗುತ್ತಿಗೆದಾರರುಗಳ ಪೈಕಿ ಟೆಂಡರ್ ಕರೆಯಲಾದ ಶೇ. 6.95ರಷ್ಟು ಕಾಮಗಾರಿಗಳ ಆಯ್ಕೆಗಾಗಿ ಯಾದೃಚ್ಛಿಕವಾದ ರೀತಿಯ ಕ್ರಮವನ್ನು ಅನುಸರಿಸತಕ್ಕದ್ದು.

(ಬಿ) ತರುವಾಯ ಅನುಮೋದನೆಯಾದ ಕಾಮಗಾರಿಗಳನ್ನು ಸಹ ನಿಯತಕಾಲಿಕವಾಗಿ ಯಾದೃಚ್ಛಿಕವಾದ ರೀತಿಯ ಕ್ರಮವನ್ನು ಅನುಸರಿಸಿ ಆಯ್ಕೆ ಮಾಡತಕ್ಕದ್ದು.

(ಸಿ) ಯಾದೃಚ್ಛಿಕ ಕ್ರಮದ ಅನುಸರಣೆಗಾಗಿ, ಇಂಜಿನಿಯರಿಂಗ್ ವಿಭಾಗವನ್ನು ಅಥವಾ ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯನ್ನು, ಒಂದು ಘಟಕವಾಗಿ ಪರಿಗಣಿಸತಕ್ಕದ್ದು.

(ಡಿ) ಕಾಮಗಾರಿಗಳ ಯಾದೃಚ್ಛಿಕರಣ ಕ್ರಮವನ್ನು, ಕಾಮಗಾರಿಗಳ ಸಂಖ್ಯೆ ನಾಲ್ಕಕ್ಕಿಂತ ಹೆಚ್ಚಾಗಿದ್ದಾಗ ಆ ರೀತಿ ಮಾಡತಕ್ಕದ್ದು.

(ಇ) ಒಂದು ನಿರ್ದಿಷ್ಟ ಕಾಮಗಾರಿಯನ್ನು ಯಾದೃಚ್ಛಿಕ ಕ್ರಮದ ಪ್ರಕ್ರಿಯೆಯಲ್ಲಿ ಸೇರಿಸಿದ್ದಲ್ಲಿ ಅಥವಾ ಸಾಕಷ್ಟು ಪ್ರಮಾಣದ ಸಂಖ್ಯೆಯ ಕಾಮಗಾರಿಗಳ ಕೊರತೆಯಿಂದಾಗಿ ಯಾದೃಚ್ಛಿಕರಣ ಕ್ರಮಕ್ಕೆ ಸೇರಿಸದಿದ್ದಲ್ಲಿ, ಅವುಗಳನ್ನು ಮೊದಲ ಯಾದೃಚ್ಛೀಕರಣ ಪ್ರಕ್ರಿಯೆಯ ಅವಧಿಯಲ್ಲಿ ಆಯ್ಕೆ ಮಾಡಿರುವುದಿಲ್ಲ ಎಂಬ ಕಾರಣಗಳಿಗಾಗಿ ಮತ್ತೆ ಅವುಗಳನ್ನು ಯಾದೃಚ್ಛಿಕರಣ ಪ್ರಕ್ರಿಯೆಗೆ ಒಳಪಡಿಸತಕ್ಕದ್ದಲ್ಲ.

(ಎಫ್) ಈ ನಿಯಮದ ಮೇರೆಗೆ ಎರಡು ಬಾರಿ ಬಿಡ್‌ನಲ್ಲಿ ಪಾಲ್ಗೊಂಡು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಯಾರೇ ಟೆಂಡರುದಾರರು ಅರ್ಹರಾಗದಿದ್ದರೆ, ಆಗ ಇಂಥ ಕಾಮಗಾರಿಗಳನ್ನು, ಪಾಲ್ಗೊಳ್ಳಬಹುದಾದ ಸಾಮಾನ್ಯ ಅಥವಾ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳ ಎಲ್ಲಾ ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸುವುದಕ್ಕೆ ಮುಕ್ತವಾಗಿ ಇರಿಸತಕ್ಕದ್ದು.

(ಜಿ) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಟೆಂಡರ್‌ದಾರರುಗಳ ಅರ್ಹತೆಯನ್ನು ಪರಿಶೀಲಿಸುವುದಕ್ಕೆ ಕಾರ್ಯಪಾಲಕ ಇಂಜಿನಿಯರ್ ಅಥವಾ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಜವಾಬ್ದಾರಿಯಾಗಿರತಕ್ಕದ್ದು. ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಟೆಂಡರ್‌ದಾರರುಗಳ ಪರಿಶೀಲನೆಯನ್ನು 6ನೇ ಪ್ರಕರಣದಲ್ಲಿ ಉಪಬಂಧಿಸಿದ ವಿವರಣೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಮಾಡತಕ್ಕದ್ದು.

(ಎಚ್) ಗುತ್ತಿಗೆದಾರನು ಒಂದು ಫರ್ಮ್ ಆಗಿದ್ದ ಸಂದರ್ಭದಲ್ಲಿ, ಆಗ ಫರ್ಮಿನ ಎಲ್ಲ ಪಾಲುದಾರರುಗಳನ್ನು ಅಥವಾ ಸದಸ್ಯರುಗಳನ್ನು, ಅನುಸೂಚಿತ ಜಾತಿಗಳು ಅಥವಾ ಸಂದರ್ಭಾನುಸಾರ ಅನುಸೂಚಿತ ಪಂಗಡಗಳಿಗೆ ಸೇರಿಸತಕ್ಕದ್ದು.

(ಐ) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಗುತ್ತಿಗೆದಾರನು, 10 ವರ್ಷಗಳಿಗಿಂತ ಹೆಚ್ಚಾಗಿ ಕರ್ನಾಟಕ ರಾಜ್ಯದಲ್ಲಿ ಖಾಯಂ ನಿವಾಸಿಯಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸದಾನಂದ್ ಎನ್. ಪವಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಆರ್ಥಿಕ ಇಲಾಖೆ
(ಸಂಗ್ರಹಣಾ ಕೋಶ)

## ಆರ್ಥಿಕ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಎಫ್‌ಡಿ 574(ಎ) ವೆಚ್ಚ-12/2019, ಬೆಂಗಳೂರು, ದಿನಾಂಕ: 7ನೇ ಸೆಪ್ಟೆಂಬರ್, 2019**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ 29)ರ 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಇವು ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ದ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), 2ನೇ ನಿಯಮದಲ್ಲಿ,-

(1) (ಸಿ) ಖಂಡದಲ್ಲಿ,-

(i) ಶೀರ್ಷಿಕೆಯ "ಎರಡು-ಲಕೋಟೆ ಪದ್ಧತಿ" ಎಂಬ ಪದಗಳಿಗೆ ಬದಲಿಯಾಗಿ, "ಎರಡು ಟೆಂಡರ್ ದಸ್ತಾವೇಜು ಪದ್ಧತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಮೊಹರು ಲಕೋಟೆಗಳು, ಒಂದು" ಎಂಬ ಪದಗಳ ಬದಲಿಯಾಗಿ, "ಎಲೆಕ್ಟ್ರಾನಿಕ್ ದಸ್ತಾವೇಜುಗಳು; ಮೊದಲು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iii) "ಲಕೋಟೆ" ಎಂಬ ಪದವನ್ನು ಬಿಟ್ಟು ಬಿಡತಕ್ಕದ್ದು.

(2) (ಎಚ್) ಖಂಡದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(i) "**ಟೆಂಡರ್ ಪ್ರಕ್ರಿಯೆ ಶುಲ್ಕ"** ಎಂದರೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆರಂಭವಾಗುವ ಟೆಂಡರ್‌ಗಳಲ್ಲಿ ಭಾಗವಹಿಸುವುದಕ್ಕಾಗಿ ವೈಯಕ್ತಿಕ ಪೂರೈಕೆದಾರನ ಮೂಲಕ ಪಾವತಿಮಾಡಬೇಕಾದ ಸಕ್ಷಮ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಮರುಪಾವತಿ ಮಾಡಲಾಗದ ಶುಲ್ಕಗಳು;

**3. ನಿಯಮ 4, 5, 6, 7 ಮತ್ತು 8 ಅನ್ನು ಬಿಟ್ಟುಬಿಡುವುದು.-** ಸದರಿ ನಿಯಮಗಳ 4, 5, 6, 7 ಮತ್ತು 8ನೇ ನಿಯಮಗಳನ್ನು ಬಿಟ್ಟುಬಿಡತಕ್ಕದ್ದು.

**4. 9ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 9ನೇ ನಿಯಮದಲ್ಲಿ,-

(i) "ಟೆಂಡರ್‌ಗಳನ್ನು ಆಹ್ವಾನಿಸುವ ನೋಟೀಸು" ಎಂಬ ಪದಗಳ ತರುವಾಯ, "ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಪ್ರಕಟಿಸತಕ್ಕದ್ದು ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ಸಿ) ಖಂಡಕ್ಕೆ ಬದಲಿಯಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-
"(ಸಿ) ಟೆಂಡರ್ ದಸ್ತಾವೇಜುಗಳನ್ನು ಯಾವ ದಿನಾಂಕ ಮತ್ತು ಸಮಯದವರೆಗೆ ಮತ್ತು ಯಾವ ಸ್ಥಳದಿಂದ ಪಡೆಯಬಹುದು"; ಮತ್ತು

(iii) (ಎಫ್) ಖಂಡಕ್ಕೆ ಬದಲಿಯಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-
"(ಎಫ್) ಸ್ವೀಕರಿಸಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ; ಮತ್ತು"

**5. 10ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 10ನೇ ನಿಯಮದಲ್ಲಿ,-

(i) (1)ನೇ ಉಪ-ನಿಯಮಕ್ಕೆ ಬದಲಿಯಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-
"(1) ವಾರ್ತಾ ಪತ್ರಿಕೆಯಲ್ಲಿ ನೀಡುವ ಜಾಹೀರಾತು ಸಂಕ್ಷಿಪ್ತವಾಗಿರತಕ್ಕದ್ದು, ಅದರಲ್ಲಿ ನಿರ್ಮಾಣ ಕಾಮಗಾರಿಗಳ ಅಥವಾ ಸಂಗ್ರಹಿಸಬೇಕಾದ ಸರಕುಗಳ ಅಥವಾ ಅಪೇಕ್ಷಿತ ಸೇವೆಗಳ ಶೀರ್ಷಿಕೆಯನ್ನು ಹಾಗೂ ಟೆಂಡರ್ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯವನ್ನು ಒಳಗೊಂಡಿರತಕ್ಕದ್ದು ಮತ್ತು ಟೆಂಡರ್ ದಸ್ತಾವೇಜು ವಿವರಗಳು ಲಭ್ಯವಿರುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನ ವೆಬ್ ವಿಳಾಸದ ಉಲ್ಲೇಖವನ್ನು ಸಹ ಒದಗಿಸತಕ್ಕದ್ದು"; ಮತ್ತು

(ii) (4)ನೇ ಉಪ-ನಿಯಮವನ್ನು ಬಿಟ್ಟು ಬಿಡತಕ್ಕದ್ದು.

**6. 12ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 12ನೇ ನಿಯಮದಲ್ಲಿ, (1)ನೇ ಉಪ-ನಿಯಮದಲ್ಲಿ "ಪತ್ರಗಳು" ಎಂಬ ಪದದ ತರುವಾಯ, "ಇ-ಪೇಮೆಂಟ್‌ನ

ಆನ್‌ಲೈನ್ ಅಥವಾ ಆಫ್‌ಲೈನ್ ವಿಧಾನಗಳು ಮತ್ತು/" ಎಂಬ ಪದಗಳು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

**7. 13ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 13ನೇ ನಿಯಮದಲ್ಲಿ, (2) ಮತ್ತು (3)ನೇ ಉಪ-ನಿಯಮಕ್ಕೆ ಬದಲಿಯಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಟೆಂಡರ್ ದಸ್ತಾವೇಜುಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪೋರ್ಟಲ್‌ನಲ್ಲಿ ಟೆಂಡರ್‌ಗಳ ಪ್ರಕಟಣೆಯ ದಿನಾಂಕ ಮತ್ತು ಸಮಯದಿಂದ ಕೊನೆಯ ದಿನಾಂಕ ಮತ್ತು ಸಮಯದವರೆಗೆ ಅಥವಾ 15ನೇ ನಿಯಮದ ಮೇರೆಗೆ ಸಲ್ಲಿಸಲು ವಿಸ್ತರಿಸಲಾದ ಸಮಯದವರೆಗೂ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳುವುದಕ್ಕೆ ಲಭ್ಯವಿರತಕ್ಕದ್ದು".

**8. 14ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 14ನೇ ನಿಯಮದಲ್ಲಿ,

(i) "ಹೊರಡಿಸು", ಎಂಬ ಪದಕ್ಕೆ ಬದಲಿಯಾಗಿ, "ಅಪ್‌ಲೋಡ್ ಮಾಡುವುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಮೂಲ ಟೆಂಡರ್ ದಸ್ತಾವೇಜುಗಳನ್ನು ಖರೀದಿಸಿದ ಎಲ್ಲರಿಗೂ ಅಂತಹ ಬದಲಾವಣೆಯ ಸೂಚನೆಯನ್ನು ಕಳುಹಿಸತಕ್ಕದ್ದು" ಎಂಬ ಪದಗಳಿಗೆ ಬದಲಿಯಾಗಿ "ಇವುಗಳನ್ನು ಸೇರ್ಪಡೆಮಾಡುವ ಅಥವಾ ತಿದ್ದೋಲೆ ಅಥವಾ ಸ್ಪಷ್ಟೀಕರಣವನ್ನು ಹೊರಡಿಸುವ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಅಧಿಸೂಚಿತಕ್ಕದ್ದು ಮತ್ತು ಅವುಗಳು ಮೂಲ ಟೆಂಡರ್ ದಸ್ತಾವೇಜುಗಳ ಭಾಗದಂತೆ ಇರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 15ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 15ನೇ ನಿಯಮದಲ್ಲಿ;

(i) ಶೀರ್ಷಿಕೆಯಲ್ಲಿ, "ಸ್ಥಳ" ಎಂಬ ಪದಕ್ಕೆ ಬದಲಿಯಾಗಿ, "ದಿನಾಂಕ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ii) (1)ನೇ ಉಪ-ನಿಯಮಕ್ಕೆ ಬದಲಿಯಾಗಿ ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಯು, 17ನೇ ನಿಯಮದ ಮೇರೆಗೆ ಉಪಬಂಧಿಸಲಾದ ಉಪಬಂಧಗಳಿಗೊಳಪಟ್ಟು ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದಕ್ಕಾಗಿ ಕೊನೆಯ ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸತಕ್ಕದ್ದು";

(iii) (2)ನೇ ಉಪ-ನಿಯಮವನ್ನು ಬಿಟ್ಟುಬಿಡತಕ್ಕದ್ದು;

(iv) (3)ನೇ ಉಪ-ನಿಯಮದಲ್ಲಿ, "ಉದ್ದೇಶಿಸಿದ ಎಲ್ಲಾ ಟೆಂಡರ್‌ದಾರರುಗಳ ಪ್ರಕರಣಗಳಲ್ಲಿ" ಎಂಬ ಪದಗಳಿಗೆ ಬದಲಿಯಾಗಿ, "ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(v) (3)ನೇ ಉಪ-ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(4) (ಎ) ಟೆಂಡರ್‌ದಾರರುಗಳು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ದ ಕೇಂದ್ರ ಅಧಿನಿಯಮ 21)ರ ಮೇರೆಗೆ ನೀಡಿದ ತಮ್ಮ ಸಿಂಧುವಾದ ಡಿಜಿಟಲ್ ಸಹಿ ಪ್ರಮಾಣಪತ್ರ (ಡಿಎಸ್‌ಸಿ)ದೊಂದಿಗೆ ತಮ್ಮ ಬಿಡ್‌ಗಳಿಗೆ ಡಿಜಿಟಲ್ ಸಹಿಯನ್ನು ಮಾಡತಕ್ಕದ್ದು; ಮತ್ತು

(ಬಿ) ಟೆಂಡರ್‌ಗಳ ಸ್ವೀಕೃತಿಗಾಗಿ ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ತಮ್ಮ ಟೆಂಡರ್‌ನ್ನು ಸಲ್ಲಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಟೆಂಡರ್‌ದಾರರುಗಳ ಜವಾಬ್ದಾರಿಯಾಗಿರತಕ್ಕದ್ದು.

**10. 16ನೇ ನಿಯಮವನ್ನು ಬಿಟ್ಟುಬಿಡುವುದು.-** ಸದರಿ ನಿಯಮಗಳ 16ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**11. 17ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 17ನೇ ನಿಯಮದಲ್ಲಿ,-

(i) (1)ನೇ ಉಪ-ನಿಯಮದಲ್ಲಿ,

(ಎ) "ಯುಕ್ತ ಟೆಂಡರ್ ಬುಲೆಟಿನ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುವ ನೋಟೀಸಿನ ಪ್ರಕಟಣೆಯ ದಿನಾಂಕದ ನಡುವೆ (ಅಥವಾ ಇ-ಸಂಗ್ರಹಣೆಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ಇದರಲ್ಲಿ ಯಾವುದು ಅನಂತರವೋ ಅದು ಮತ್ತು)" ಎಂಬ ಪದಗಳಿಗೆ ಬದಲಿಯಾಗಿ, "ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಪ್ರಕಟಿಸಿದ ಸಮಯದಿಂದ ಮತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಈ ಕೆಳಗಿನಂತಿರಲಿ" ಎಂಬ ಪದಗಳಿಗೆ ಬದಲಿಯಾಗಿ, "ಈ ಕೆಳಗೆ ನಮೂದಿಸಿದ ಕಾಲಾವಧಿಗಿಂತ ಕಡಿಮೆಯಿರಬಾರದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಎ)ದಲ್ಲಿ "ಮೂವತ್ತು" ಎಂಬ ಪದಕ್ಕೆ ಬದಲಿಯಾಗಿ, "ಹದಿನೈದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ಡಿ) ಖಂಡ (ಬಿ)ದಲ್ಲಿ "ಅರವತ್ತು" ಎಂಬ ಪದಕ್ಕೆ ಬದಲಿಯಾಗಿ, "ಮೂವತ್ತು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪ-ನಿಯಮದಲ್ಲಿ, "ಲಿಖಿತ" ಎಂಬ ಪದದ ನಂತರ, "ಈ ಕಡಿತಗೊಂಡ ಅವಧಿಯು ಏಳು ದಿನಗಳಿಗಿಂತ ಕಡಿಮೆ ಇರತಕ್ಕದ್ದಲ್ಲ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(iii) (2)ನೇ ಉಪ-ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(3) ಟೆಂಡರ್‌ಗಳ ಸಲ್ಲಿಕೆಗಾಗಿ ಹಾಗೆ ನಿಗದಿಪಡಿಸಿದ ಕೊನೆಯ ದಿನಾಂಕವು, ಕೆಲಸದ ದಿನವಾಗಿರತಕ್ಕದ್ದು ಮತ್ತು ಅದರ ಸಮಯವು ಕಡ್ಡಾಯವಾಗಿ 10.00 ಗಂಟೆಗಳು ಮತ್ತು 17.30 ಗಂಟೆಗಳ ನಡುವೆ ಇರತಕ್ಕದ್ದು".

**12. 18ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 18ನೇ ನಿಯಮಕ್ಕೆ ಬದಲಿಯಾಗಿ ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"18. ಟೆಂಡರ್‌ಗಳನ್ನು ತೆರೆಯುವುದು.-** ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ ಅಥವಾ ಇವರ ಪ್ರತಿನಿಧಿಯು, ಬಿಡ್‌ದಾರರುಗಳ ಉಪಸ್ಥಿತಿಯು ಅಗತ್ಯವಿಲ್ಲದೆ, ಗೊತ್ತುಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ತೆರೆಯಬಹುದು".

**13. 19ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 19ನೇ ನಿಯಮದಲ್ಲಿ,-

(i) (ಎ), (ಬಿ), (ಸಿ) ಮತ್ತು (ಡಿ) ಖಂಡಗಳಿಗೆ ಬದಲಿಯಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) **ಸ್ವೀಕೃತಗೊಂಡಿದೆ** ಎಂದು ಹೇಳಲಾಗುವ ಸಲ್ಲಿಕೆಯಾದ ಟೆಂಡರ್‌ಗಳ ಪಟ್ಟಿಯನ್ನು ಮತ್ತು **ಡ್ರಾಫ್ಟ್ (ಕರಡು)** ಎಂದು ಕರೆಯಲಾಗುವ ಅಪೂರ್ಣ ಟೆಂಡರ್‌ಗಳ ಪಟ್ಟಿಯನ್ನು ಪ್ರದರ್ಶಿಸತಕ್ಕದ್ದು.

(ಬಿ) ಯಶ್ವಸಿಯಾಗಿ ಸ್ವೀಕೃತಿಯಾದ ಎಲ್ಲಾ ಟೆಂಡರ್ ಪಾವತಿಗಳನ್ನು ಪ್ರದರ್ಶಿಸತಕ್ಕದ್ದು.

(ಸಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಮತ್ತು ಯಾರ ಟೆಂಡರ್ ಪಾವತಿಗಳು ಯಶಸ್ವಿಯಾಗಿ ಸ್ವೀಕೃತಗೊಂಡಿದೆಯೋ ಅವುಗಳನ್ನು ತೆರೆಯತಕ್ಕದ್ದು.

(ಡಿ) ಟೆಂಡರ್‌ದಾರರುಗಳ ಹೆಸರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಪ್ರಕಟಿಸತಕ್ಕದ್ದು." ಮತ್ತು

(ii) ಖಂಡ (ಎಫ್) ಅನ್ನು ಬಿಟ್ಟುಬಿಡತಕ್ಕದ್ದು.

**14. 20ನೇ ನಿಯಮ ತಿದ್ದುಪಡಿ.-** ಸದರಿ ನಿಯಮಗಳ 20ನೇ ನಿಯಮದಲ್ಲಿ, (1)ನೇ ಉಪ-ನಿಯಮದಲ್ಲಿ, "ಟೆಂಡರ್‌ಗಳನ್ನು ತೆರೆಯುವುದರ ಮೇಲ್ವಿಚಾರಣೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**15. 25ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 25ನೇ ನಿಯಮದಲ್ಲಿ, (2)ನೇ ಉಪ-ನಿಯಮದಲ್ಲಿ, (ಎ) ಮತ್ತು (ಬಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

**16. 26ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 26ನೇ ನಿಯಮದಲ್ಲಿ,-

(i) (2)ನೇ ಉಪ-ನಿಯಮಕ್ಕೆ ಬದಲಿಯಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಗಣಕಯಂತ್ರವು (system) ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ಪರಿಶೀಲನೆಗಾಗಿ ತೌಲನಿಕ ವಿವರಪತ್ರದೊಂದಿಗೆ ಟೆಂಡರ್‌ಗಳ ಮೌಲ್ಯಮಾಪನದ ವಿವರಪಟ್ಟಿಯನ್ನು ಸ್ವಯಂ ಚಾಲಿತವಾಗಿ ಸಿದ್ಧಗೊಳಿಸತಕ್ಕದ್ದು."

(ii) (2) ಉಪ-ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ) ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು, 25ನೇ ನಿಯಮದ ಅನುಸಾರ, ಟೆಂಡರ್‌ಗಳ ಮೌಲ್ಯಮಾಪನದ ನಂತರ ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

(2ಬಿ) ತೌಲನಿಕ ವಿವರಪತ್ರದೊಂದಿಗೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ಆದೇಶವನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

(2ಸಿ) ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಯಶಸ್ವಿಯಾದ ಟೆಂಡರ್‌ದಾರರುಗಳಿಗೆ ಆ ವಿಷಯವನ್ನು ತಿಳಿಸತಕ್ಕದ್ದು."

**17. 28ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 28ನೇ ನಿಯಮದಲ್ಲಿ,-

(ಎ) ಶೀರ್ಷಿಕೆಯಲ್ಲಿ, "ಎರಡು ಟೆಂಡರ್ ದಸ್ತಾವೇಜು ಪದ್ಧತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (2), (3), (4) ಮತ್ತು (5)ನೇ ಉಪ-ನಿಯಮದಲ್ಲಿ, "ಲಕೋಟೆ" ಎಂಬ ಪದಕ್ಕೆ ಬದಲಿಯಾಗಿ, ಅದು ಬರುವ ಕಡೆಗಳೆಲ್ಲೆಲ್ಲಾ, "ವಿದ್ಯುನ್ಮಾನ ದಸ್ತಾವೇಜು", ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**18. 28ಇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 28ಇ ನಿಯಮದಲ್ಲಿ, (iii)ನೇ ಬಾಬುವಿನಲ್ಲಿ, "ಸಂಘ ಸಂಸ್ಥೆಗಳು ಮತ್ತು ರೂ. 1,00,000 ಕ್ಕಿಂತ ಕಡಿಮೆ" ಎಂಬ ಪದಗಳು ಮತ್ತು ಸಂಖ್ಯೆಗಳನ್ನು ಬಿಟ್ಟುಬಿಡತಕ್ಕದ್ದು.

**19. 29ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 29ನೇ ನಿಯಮವನ್ನು, ಅದರ (1)ನೇ ಉಪ-ನಿಯಮವೆಂದು ಹೊಸ ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೇ ಹೊಸ ಸಂಖ್ಯೆ ನೀಡಿದ (1)ನೇ ಉಪ-ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(2) ಬಾಧಿತ ಟೆಂಡರ್‌ದಾರನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಟೆಂಡರ್ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಪೀಲು ಪ್ರಾಧಿಕಾರಕ್ಕೆ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ಆನ್‌ಲೈನ್‌ನಲ್ಲಿ ಅಪೀಲನ್ನು ಸಲ್ಲಿಸತಕ್ಕದ್ದು"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಮಲ್ಲಿಕಾರ್ಜುನ ಎಸ್ ಹಲಕುರ್ಕಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ಸಂಗ್ರಹಣೆ ಕೋಶ) (ಪ್ರಭಾರ)

**ಆರ್ಥಿಕ ಇಲಾಖೆ**

**ಅಧಿಸೂಚನೆ**

**ಸಂಖ್ಯೆ. ಎಫ್‌ಡಿ 884 ವೆಚ್ಚ-12/2019, ಬೆಂಗಳೂರು, ದಿನಾಂಕ: 7ನೇ ಮೇ 2020**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ 29)ರ 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000 ದಲ್ಲಿ, (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) (ಎ) ಖಂಡದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

**"(ಎಎ)** "ಭ್ರಷ್ಟಾಚಾರ" ಎಂದರೆ, ಸಂಗ್ರಹಣೆ ಪ್ರಕ್ರಿಯೆಯಲ್ಲಿ ಅಥವಾ ಕರಾರು ಮಾಡಿಕೊಳ್ಳುವಲ್ಲಿ ಸಾರ್ವಜನಿಕ ಅಧಿಕಾರಿಯನ್ನು ಆಮಿಷಕ್ಕೆ ಒಳಗಾಗಿಸುವ ಭಾಗವಾಗಿ ಯಾವುದೇ ಮೌಲ್ಯಯುತ ವಸ್ತುವನ್ನು ತೆಗೆದುಕೊಳ್ಳುವಂತೆ ಕೊಡುವುದು, ನೀಡುವುದು, ಸ್ವೀಕರಿಸುವುದು ಅಥವಾ ಹಾಗೆ ಮಾಡುವಂತೆ ಒತ್ತಾಯ ಪೂರ್ವಕವಾಗಿ ಕೋರಿಕೊಳ್ಳುವುದು;

**(ಎಬಿ)** "ಮೋಸ" ಎಂದರೆ, ಸಂಗ್ರಹಣೆ ಸಂಸ್ಥೆಗೆ ಹಾನಿಯುಂಟುಮಾಡುವ ನಿಟ್ಟಿನಲ್ಲಿ ಸಂಗ್ರಹಣೆ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವುದು ಅಥವಾ ಕರಾರು ಮಾಡಿಕೊಳ್ಳುವಲ್ಲಿ ವಾಸ್ತವ ಸಂಗತಿಗಳನ್ನು ತಪ್ಪಾಗಿ ನಿರೂಪಣೆ ಮಾಡುವುದು ಮತ್ತು ಇದರಲ್ಲಿ ಟೆಂಡರ್‌ದಾರರುಗಳ ನಡುವೆ ಟೆಂಡರ್ ಸಲ್ಲಿಸುವ ಮುಂಚೆ ಅಥವಾ ನಂತರ ಶಾಮೀಲಾಗುವುದು ಮತ್ತು ಕೃತಕವಾಗಿ ಸ್ಪರ್ಧಾತ್ಮಕವಲ್ಲದ ಹಂತಗಳಲ್ಲಿ ಟೆಂಡರ್ ಬೆಲೆಗಳನ್ನು ಸಾಬೀತುಪಡಿಸುವಂತೆ ಸೃಜಿಸುವುದು

ಮತ್ತು ಉಚಿತ ಹಾಗೂ ಮುಕ್ತ ಸ್ಪರ್ಧೆಯ ಲಾಭಗಳನ್ನು ಪಡೆದುಕೊಳ್ಳುವುದರಿಂದ ಸಂಗ್ರಹಣೆ ಸಂಸ್ಥೆಯನ್ನು ವಂಚಿಸುವಂತೆ ಮಾಡುವುದೂ ಒಳಗೊಳ್ಳುತ್ತದೆ"

**3. 3ಎ ಹೊಸ ನಿಯಮದ ಸೇರ್ಪಡೆ.-** ಸದರಿ ನಿಯಮಗಳ 3ನೇ ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

**"3ಎ ಸರ್ಕಾರದ ಇ-ಮಾರುಕಟ್ಟೆ ವಿಭಾಗದ ಮುಖಾಂತರ ಸಂಗ್ರಹಣೆ {ಇದರಲ್ಲಿ ಇನ್ನು ಮುಂದೆ ಜಿಇಎಂ ಎಂಬುದಾಗಿ ಉಲ್ಲೇಖಿಸಲಾಗಿದೆ}.-** (1) ಸಂಗ್ರಹಣೆ ಸಂಸ್ಥೆಯು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜಿಇಎಂ ಪೋರ್ಟಲ್ ಮುಖಾಂತರ ಸರಕುಗಳು ಮತ್ತು ಸೇವೆಗಳನ್ನು ಸಂಗ್ರಹಿಸತಕ್ಕದ್ದು, ಎಂದರೆ:-

(i) ಜಿಇಎಂ ಪೋರ್ಟಲ್‌ನಲ್ಲಿ ಲಭ್ಯವಿರಬಹುದಾದ ಸರಕುಗಳು ಮತ್ತು ಸೇವೆಗಳು; ಮತ್ತು ಸಂಗ್ರಹಿಸಬಹುದಾದ ಗುಣಮಟ್ಟ, ಮತ್ತು ಸರಬರಾಜು ಅವಧಿಯ ನಿರ್ದಿಷ್ಟ ಮಾನದಂಡಗಳನ್ನು ಪೂರೈಸಬೇಕು.

(ii) ಅಧಿನಿಯಮದ 4ನೇ ಪ್ರಕರಣದ (ಇ) ಮತ್ತು (ಇಇ) ಖಂಡದ ಮೇರೆಗೆ ಗೊತ್ತುಪಡಿಸಲಾದ ಮೌಲ್ಯದ ವರೆಗಿನ ಸರಕುಗಳು ಮತ್ತು ಸೇವೆಗಳನ್ನು, ಜಿಇಎಂ ಪೋರ್ಟಲ್‌ನಲ್ಲಿ ಒದಗಿಸಿದ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಯಾವುದೇ ಲಭ್ಯವಿರುವ ಪೂರೈಕೆದಾರರುಗಳ ಮುಖಾಂತರವಾಗಿ ನೇರವಾಗಿ ಸಂಗ್ರಹಿಸಬಹುದು;

(iii) ಅಧಿನಿಯಮದ 4ನೇ ಪ್ರಕರಣದ (ಇ) ಮತ್ತು (ಇಇ) ಖಂಡದ ಮೇರೆಗೆ ಗೊತ್ತುಪಡಿಸಲಾದ ಮಿತಿಯನ್ನು ಮೀರಿದ ಸರಕುಗಳು ಮತ್ತು ಸೇವೆಗಳನ್ನು, ಜಿಇಎಂ ಪೋರ್ಟಲ್‌ನಲ್ಲಿ ಒದಗಿಸಿದ ಆನ್‌ಲೈನ್ ಬಿಡ್ಡಿಂಗ್ ಅನ್ನು ಅಥವಾ ಹಿಮ್ಮುಖ ಹರಾಜು ಸಾಧನವನ್ನು ಬಳಸುವ ಟೆಂಡರ್‌ದಾರರುಗಳಿಗೆ ಕರೆ ನೀಡಿದ ತರುವಾಯ ಸಂಗ್ರಹಿಸತಕ್ಕದ್ದು; ಮತ್ತು

(iv) ಕಛೇರಿಯ ಬಳಕೆಗೆ ಅಗತ್ಯವಾದ ಮೋಟಾರ್ ವಾಹನಗಳನ್ನು (automobiles) ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಮಂಜೂರಾತಿಯನ್ನು ಪಡೆದುಕೊಂಡ ನಂತರ ನೇರವಾಗಿ ಸಂಗ್ರಹಿಸಬಹುದು.

(2) ಜಿಇಎಂ ಪೋರ್ಟಲ್‌ನಲ್ಲಿ ಒದಗಿಸಿದ ರಿಯಾಯಿತಿ ಮತ್ತು ವಿನಾಯಿತಿಗಳು, ಯಾವುದಾದರೂ ಇದ್ದಲ್ಲಿ, ಸರಕುಗಳು ಮತ್ತು ಸೇವೆಗಳನ್ನು ಸಂಗ್ರಹಿಸುವಾಗ ಅವುಗಳ ಪ್ರಯೋಜವನ್ನು ಪಡೆದುಕೊಳ್ಳಬಹುದು"

**4. 26ಎ, 26ಬಿ, 26ಸಿ, ಮತ್ತು 26ಡಿ ಹೊಸ ನಿಯಮಗಳ ಸೇರ್ಪಡೆ.-** ಸದರಿ ನಿಯಮಗಳ 26ನೇ ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

**"26ಎ. ಸಂಗ್ರಹಣಾ ಸಂಸ್ಥೆಯು ಟೆಂಡರ್‌ದಾರರುಗಳನ್ನು ನಿಷೇಧಿಸುವುದು.-** (1) ಸಂಗ್ರಹಣಾ ಸಂಸ್ಥೆಯು ಸಂಗ್ರಹಣೆಯ ಮತ್ತು ಟೆಂಡರ್ ಅನ್ನು ಕಾರ್ಯಗತಗೊಳಿಸುವ ಕಾರ್ಯದ ಯಾವುದೇ ಹಂತದಲ್ಲಿ ಸಂಗ್ರಹಣಾ ಸಂಸ್ಥೆಯನ್ನು ತಪ್ಪುದಾರಿಗೆ ಎಳೆಯುವುದೂ ಸೇರಿದಂತೆ, ಟೆಂಡರ್‌ನ ಭಾಗವಹಿಸುವಿಕೆಯಲ್ಲಿ ಅಥವಾ ಅದರ ಸ್ಪರ್ಧೆಯಲ್ಲಿ ಅಥವಾ ಕಾರ್ಯಗತಗೊಳಿಸುವಲ್ಲಿ, ಭ್ರಷ್ಟಾಚಾರದಲ್ಲಿ ಅಥವಾ ಮೋಸದ ಕಾರ್ಯದಲ್ಲಿ ನೇರವಾಗಿ ಅಥವಾ ಏಜೆಂಟ್‌ನ ಮೂಲಕ ತೊಡಗಿಸಿಕೊಂಡಂತಹ ಟೆಂಡರ್‌ದಾರನನ್ನು ಅಥವಾ ಗುತ್ತಿಗೆದಾರನನ್ನು ಅಥವಾ ಪೂರೈಕೆದಾರನನ್ನು ಅಥವಾ ಅಂತಹ ಟೆಂಡರ್‌ದಾರನ ಅಥವಾ ಗುತ್ತಿಗೆದಾರನ ಅಥವಾ ಪೂರೈಕೆದಾರನ ಯಾರೇ ಉತ್ತರಾಧಿಕಾರಿಯನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ನಿಷೇಧಿಸುವುದಕ್ಕೆ ಕ್ರಮಕೈಗೊಳ್ಳಬಹುದು.

(2) ಸಂಗ್ರಹಣಾ ಸಂಸ್ಥೆಯು, ಆದೇಶದ ಮೂಲಕ, ನಿಷೇಧಿಸುವ ಬಿಡ್‌ದಾರನ ಅಥವಾ ಗುತ್ತಿಗೆದಾರನ ಅಥವಾ ಪೂರೈಕೆದಾರನ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಅದರ ಬಗ್ಗೆ ನಿರ್ಣಯ ಕೈಗೊಳ್ಳುವುದಕ್ಕೆ ನಿಷೇಧ ಸಮಿತಿ ಎಂದು ಕರೆಯುವ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಅಂತಹ ಅಧಿಕಾರಿಗಳನ್ನು ಒಳಗೊಂಡ ಒಂದು ಸಮಿತಿಯು ಇರತಕ್ಕದ್ದು.

(3) ಮಾಹಿತಿಯನ್ನು ಸ್ವೀಕರಿಸಿದ ನಂತರ, ನಿಷೇಧ ಸಮಿತಿಯು, ನಿರ್ಣಯ ಕೈಗೊಳ್ಳುವ ಮೊದಲು, ಸಂಬಂಧಿಸಿದವರಿಗೆ ಅವರ ಮನವಿಗಳನ್ನು ಸಲ್ಲಿಸುವುದಕ್ಕೆ ಮೌಖಿಕ ಸುನಾವಣೆಯನ್ನು ಒಳಗೊಂಡಂತೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

(4) ನಿಷೇಧದ ಪರಿಗಣನೆಗಾಗಿ, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ ಅಥವಾ ಟೆಂಡರ್ ಅಂಗೀಕರಿಸುವ ಪ್ರಾಧಿಕಾರದಿಂದ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಯು, ಮೇಲ್ಕಂಡ (2)ನೇ ಉಪ-ನಿಯಮದ ಮೇರೆಗೆ ರಚಿಸಿದ ನಿಷೇಧ ಸಮಿತಿಗೆ ಭ್ರಷ್ಟಾಚಾರ ಮತ್ತು ಮೋಸದ ವ್ಯವಹಾರದಲ್ಲಿ ತೊಡಗಿರುವಂಥ ಬಿಡ್‌ದಾರರ ಅಥವಾ ಗುತ್ತಿಗೆದಾರರುಗಳ ಅಥವಾ ಪೂರೈಕೆದಾರರುಗಳ ವಿವರಗಳನ್ನು ಒದಗಿಸತಕ್ಕದ್ದು.

(5) ನಿಷೇಧ ಸಮಿತಿಯು, ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಲಿಖಿತ ಕಾರಣದೊಂದಿಗೆ ತನ್ನ ಶಿಫಾರಸ್ಸುಗಳನ್ನು ಮಾಡಬಹುದು.

ಪರಂತು, ಸದರಿ ಅವಧಿಯನ್ನು, ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ ಸಂಗ್ರಹಣಾ ಸಂಸ್ಥೆಯು ಮತ್ತೆ ಹದಿನೈದು ದಿನಗಳವರೆಗೆ ವಿಸ್ತರಿಸಬಹುದು.

(6) ನಿಷೇಧ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ, ಸಂಗ್ರಹಣಾ ಸಂಸ್ಥೆಯು ಯಾರೇ ಟೆಂಡರ್‌ದಾರನನ್ನು ಅಥವಾ ಗುತ್ತಿಗೆದಾರನನ್ನು ಅಥವಾ ಪೂರೈಕೆದಾರನನ್ನು ನಿಷೇಧಿಸತಕ್ಕದ್ದು. ಮತ್ತು ಅದನ್ನು ಅದರ ವೆಬ್‌ಸೈಟಿನಲ್ಲಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಪ್ರಕಟಿಸತಕ್ಕದ್ದು ಮತ್ತು ಅಂತಹ ಟೆಂಡರ್‌ದಾರನ ಅಥವಾ ಗುತ್ತಿಗೆದಾರನ ಅಥವಾ ಪೂರೈಕೆದಾರನ ಅಥವಾ ಅವರುಗಳ ಯಾರೇ ಉತ್ತರಾಧಿಕಾರಿಗಳ ಪಟ್ಟಿಯನ್ನು ಸಹ ನಿರ್ವಹಿಸತಕ್ಕದ್ದು.

(7) ನಿಷೇಧದ ಆದೇಶವು ನಿಷೇಧದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದಂದು ಸ್ವಯಂಚಾಲಿತವಾಗಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

**26ಬಿ. ಸರ್ಕಾರವು ನಿಷೇಧಿಸುವುದು.-** (1) ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಮೇಲೆ ಟೆಂಡರ್‌ದಾರನನ್ನು ಅಥವಾ ಗುತ್ತಿಗೆದಾರನನ್ನು ಅಥವಾ ಪೂರೈಕೆದಾರನನ್ನು ಟೆಂಡರ್ ಪ್ರಕ್ರಿಯೆಯಿಂದ ನಿಷೇಧಿಸಬಹುದು.

(2) ನಿಷೇಧಿಸುವ ಬಿಡ್‌ದಾರನ ಅಥವಾ ಗುತ್ತಿಗೆದಾರನ ಅಥವಾ ಪೂರೈಕೆದಾರನ ಪ್ರಸ್ತಾವನೆಗಳನ್ನು ಪರಿಗಣಿಸಲು ಮತ್ತು ಅದರ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲು ರಾಜ್ಯಸರ್ಕಾರವು ಅಧಿಸೂಚಿಸಬಹುದಾದಂಥ ಅಧಿಕಾರಿಗಳನ್ನು ಒಳಗೊಂಡ ಒಂದು ರಾಜ್ಯಮಟ್ಟದ ನಿಷೇಧ ಸಮಿತಿಯು ಇರತಕ್ಕದ್ದು.

(3) ಮಾಹಿತಿಯನ್ನು ಸ್ವೀಕರಿಸಿದ ನಂತರ, ರಾಜ್ಯ ಮಟ್ಟದ ನಿಷೇಧ ಸಮಿತಿಯು, ನಿಷೇಧದ ನಿರ್ಣಯವನ್ನು ತೆಗೆದುಕೊಳ್ಳುವ ಮೊದಲು, ಸಂಬಂಧಪಟ್ಟವರಿಗೆ ಅವರ ಮನವಿಗಳನ್ನು ಸಲ್ಲಿಸುವುದಕ್ಕೆ ಒಂದು ಮೌಖಿಕ ಸುನಾವಣೆಯನ್ನು ಒಳಗೊಂಡಂತೆ, ಯುಕ್ತ ಅವಕಾಶವನ್ನು ನೀಡತಕ್ಕದ್ದು.

(4) ಬಿಡ್‌ದಾರರ ಅಥವಾ ಗುತ್ತಿಗೆದಾರರ ಅಥವಾ ಪೂರೈಕೆದಾರರ ನಿಷೇಧದ ಪರಿಗಣನೆಗಾಗಿ, ಸಂಗ್ರಹಣಾ ಸಂಸ್ಥೆಯಿಂದ ಅಧಿಕೃತಗೊಂಡ ಅಧಿಕಾರಿಯು, ಮೇಲ್ಕಂಡ (2)ನೇ ಉಪ-ನಿಯಮದ ಮೇರೆಗೆ ರಚನೆಯಾದ ರಾಜ್ಯಮಟ್ಟದ ನಿಷೇಧ ಸಮಿತಿಗೆ ಅಂತಹ ಬಿಡ್‌ದಾರರ ಅಥವಾ ಗುತ್ತಿಗೆದಾರರ ಅಥವಾ ಗುತ್ತಿಗೆದಾರರ ಅಥವಾ ಪೂರೈಕೆದಾರರುಗಳ ವಿವರಗಳನ್ನು ಒದಗಿಸತಕ್ಕದ್ದು;

(5) ರಾಜ್ಯಮಟ್ಟದ ನಿಷೇಧ ಸಮಿತಿಯು, ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ, ಮೂವತ್ತು ದಿನಗಳ ಒಳಗೆ ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ತನ್ನ ಶಿಫಾರಸ್ಸು ಮಾಡಬಹುದು;

ಪರಂತು, ಸದರಿ ಅವಧಿಯನ್ನು, ನಿಷೇಧ ಸಮಿತಿಯು ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ ಮತ್ತೆ ಹದಿನೈದು ದಿನಗಳ ಅವಧಿಯನ್ನು ವಿಸ್ತರಿಸಬಹುದು.

(6) ರಾಜ್ಯ ಮಟ್ಟದ ನಿಷೇಧ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ, ಸರ್ಕಾರವು, ಅಧಿಸೂಚನೆಯ ಮೂಲಕ ಅಂತಹ ಟೆಂಡರ್‌ದಾರನನ್ನು ಅಥವಾ ಗುತ್ತಿಗೆದಾರನನ್ನು ಅಥವಾ ಪೂರೈಕೆದಾರನನ್ನು ನಿಷೇಧಿಸತಕ್ಕದ್ದು ಮತ್ತು ಅದನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಸಹ ಪ್ರಕಟಿಸತಕ್ಕದ್ದು ಮತ್ತು ಅಂತಹ ಬಿಡ್‌ದಾರನ ಅಥವಾ ಗುತ್ತಿಗೆದಾರನ ಅಥವಾ ಪೂರೈಕೆದಾರನ ಅಥವಾ ಅವರುಗಳ ಯಾರೇ ಉತ್ತರಾಧಿಕಾರಿಯ ಪಟ್ಟಿಯನ್ನು ನಿರ್ವಹಿಸತಕ್ಕದ್ದು.

(7) ನಿಷೇಧಿಸಿದ ಟೆಂಡರ್‌ದಾರನನ್ನು ಅಥವಾ ಗುತ್ತಿಗೆದಾರನನ್ನು ಅಥವಾ ಪೂರೈಕೆದಾರನನ್ನು ನೋಂದಣಿಯಾದ ಗುತ್ತಿಗೆದಾರರುಗಳ ಅಥವಾ ಮಾರಾಟಗಾರರುಗಳ ಪಟ್ಟಿಯಿಂದ ತೆಗೆದುಹಾಕತಕ್ಕದ್ದು.

(8) ನಿಷೇಧದ ಆದೇಶವು, ನಿಷೇಧದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದಂದು ಸ್ವಯಂಚಾಲಿತವಾಗಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

**26ಸಿ. ನಿಷೇಧದ ನಂತರ ಕೈಗೊಳ್ಳಬೇಕಾದ ಕ್ರಮಗಳು.-** ಸಂಗ್ರಹಣಾ ಸಂಸ್ಥೆಯು, ಈ ಕೆಳಕಂಡ ಒಂದು ಅಥವಾ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುವುದೂ ಸೇರಿದಂತೆ ನಿಷೇಧಿತ ಟೆಂಡರ್‌ದಾರನ ಅಥವಾ ಗುತ್ತಿಗೆದಾರನ ಅಥವಾ ಪೂರೈಕೆದಾರನ ಸಂಬಂಧವಾಗಿ ಯುಕ್ತ ಕ್ರಮಗಳನ್ನು ಕೈಗೊಳ್ಳಬಹುದು, ಎಂದರೆ:-

(i) ಬಿಡ್‌ನ್ನು ತಿರಸ್ಕರಿಸುವುದು ಮತ್ತು ಇಎಂಡಿಯನ್ನು ಅಥವಾ ಬಿಡ್ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ನಗದೀಕರಣ ಮಾಡಿಕೊಳ್ಳುವುದು;

(ii) ಗುತ್ತಿಗೆಯನ್ನು ಕೊನೆಗೊಳಿಸುವುದು; ಕಾರ್ಯಕ್ಷಮತೆ ಖಾತರಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ನಗದೀಕರಣ ಮಾಡಿಕೊಳ್ಳುವುದು; ಸಂಗ್ರಹಣಾ ಸಂಸ್ಥೆಯು ವೆಚ್ಚ ಮಾಡಿದ ನಷ್ಟದ ಪರಿಹಾರವನ್ನು ವಸೂಲು ಮಾಡುವುದು;

(iii) ಅಂತಹ ಸಂಗ್ರಹಣೆಗೆ ಸಂಬಂಧಿಸಿದಂತೆ ಅಂತಹ ಟೆಂಡರ್‌ದಾರನು ಅಥವಾ ಗುತ್ತಿಗೆದಾರನು ಅಥವಾ ಪೂರೈಕೆದಾರನು ಒದಗಿಸಿದ ಯಾವುದೇ ಇತರೆ ಭದ್ರತೆಯನ್ನು ಅಥವಾ

ಖಾತರಿಯನ್ನು ಅಥವಾ ಬಾಂಡ್(ಪತ್ರ)ವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ನಗದೀಕರಣ ಮಾಡಿಕೊಳ್ಳುವುದು; ಮತ್ತು

(iv) ಸಂಗ್ರಹಣಾ ಸಂಸ್ಥೆಯು ಮಾಡಿದ ಪಾವತಿಗಳು, ಯಾವುದಾದರೂ ಇದ್ದರೆ, ಮುಂಗಡ ಪಾವತಿಗಳನ್ನು ಒಳಗೊಂಡಂತೆ, ರಾಷ್ಟ್ರೀಕೃತ ಬ್ಯಾಂಕಿನ ಚಾಲ್ತಿದರದ ಆಧಾರದ ಮೇಲೆ ಬಡ್ಡಿಯೊಂದಿಗೆ ಅವುಗಳನ್ನು ವಸೂಲಿ ಮಾಡುವುದು.

**26ಡಿ. ಗುತ್ತಿಗೆ ನಿರ್ವಹಣೆ.-** (1) ಸಂಗ್ರಹಣಾ ಸಂಸ್ಥೆಯು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ, ಗುತ್ತಿಗೆಯ ಮೌಲ್ಯವನ್ನು ಮೀರಿದ ಕಾಮಗಾರಿಗಳ, ಸರಕುಗಳು ಮತ್ತು ಸೇವೆಗಳ ಸಂಬಂಧದಲ್ಲಿ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಅಂಥ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಗುತ್ತಿಗೆ ಕರಾರು ಮಾಡಿಕೊಳ್ಳುವ ನಿರ್ವಹಣೆಯನ್ನು ಕೈಗೊಳ್ಳತಕ್ಕದ್ದು.

(2) ಗುತ್ತಿಗೆ ಕರಾರು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಚಟುವಟಿಕೆಗಳು ಮತ್ತು ಪ್ರಕ್ರಿಯೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ ಸೃಜನೆಯಾಗುವಂತೆ, ದಾಖಲಿಸುವಂತೆ, ನಿರ್ವಹಿಸುವಂತೆ ಮತ್ತು ಮೇಲ್ವಿಚಾರಣೆ ಮಾಡುವಂತೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಕೃಷ್ಣ ಎನ್ ಬುಗಟ್ಯಾಗೋಳ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿಕಾರ್ಯದರ್ಶಿ
ಆರ್ಥಿಕ ಇಲಾಖೆ (ಪಿಡಬ್ಲ್ಯೂಎಫ್‌ಸಿ)

## ಕರ್ನಾಟಕ ಸರ್ಕಾರ

ಸಂಖ್ಯೆ: ಎಫ್‌ಡಿ 218 ವೆಚ್ಚ-12/2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 26.08.2021.

## ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ 29)ರ 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡಲು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 25ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ದ 25ನೇ ನಿಯಮದಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), 25ನೇ ನಿಯಮದ, (2)ನೇ ಉಪ-ನಿಯಮದ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(3) (ಎ) ಸಂಗ್ರಹಣಾ ಸಂಸ್ಥೆಯು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ತಂತ್ರಜ್ಞಾನದ ಉತ್ಪನ್ನಗಳ ಅಥವಾ ಸರಕುಗಳ ಸಂಗ್ರಹಣೆಗಾಗಿ ಅಥವಾ ಅನುಷ್ಠಾನವನ್ನು ಒಳಗೊಂಡ ಪರಿಹಾರಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನದ ಅಂಕ ನಿರ್ಧರಣೆಯ ವಿಧಾನವನ್ನು ಅಥವಾ ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ ವಿಧಾನವನ್ನು ಅನುಸರಿಸತಕ್ಕದ್ದು.

(ಬಿ) ಟೆಂಡರ್‌ಗಳ ಮೌಲ್ಯಮಾಪನಕ್ಕಾಗಿ ತಾಂತ್ರಿಕ ಮಾನದಂಡವು, ಕರಾರು ಮೌಲ್ಯದ ಕನಿಷ್ಠ ಶೇಕಡಾ ಹತ್ತರಷ್ಟು ಹಂಚಿಕೆಯ ಮುಖಾಂತರ ಪ್ರಾಜೆಕ್ಟ್ ಸರಬರಾಜಿನಲ್ಲಿ ಸ್ಟಾರ್ಟ್‌ಅಫ್‌ನ ಟೆಂಡರ್‌ದಾರರ ಒಳಗೊಳ್ಳುವಿಕೆಗಾಗಿ ಕನಿಷ್ಠ ಪಕ್ಷ ಶೇಕಡಾ ಆರರಷ್ಟು ಕೃಪಾಂಕವನ್ನು ಒಳಗೊಂಡಿರತಕ್ಕದ್ದು.

ಪರಂತು, ಸ್ಟಾರ್ಟ್‌ಅಪ್ ಅನ್ನು ಕರ್ನಾಟಕದಲ್ಲಿ ಒಂದು ಸಂಸ್ಥೆಯಾಗಿ ಕರ್ನಾಟಕ ನವೋದ್ಯಮ ಮತ್ತು ತಂತ್ರಜ್ಞಾನ ಸೊಸೈಟಿ [KITS] ಯಲ್ಲಿ ನೋಂದಾಯಿಸಿದೆ ಮತ್ತು ಇದನ್ನು

ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮೂಲಕ ಪಟ್ಟಿಗೆ ಸೇರಿಸಿದೆ ಮತ್ತು ಟೆಂಡರ್‌ದಾರರು ಕರಾರು ಮಾಡಿಕೊಳ್ಳುವುದಕ್ಕೆ ಮತ್ತು ಕರಾರಿನ ಬದ್ಧ ಮೌಲ್ಯವನ್ನು ಕಾರ್ಯಗತಗೊಳಿಸುವುದಕ್ಕಾಗಿ ಸ್ಟಾರ್ಟ್‌ಅಪ್‌ನ ಪೂರಕ ಸಾಕ್ಷ್ಯಾಧಾರಗಳು ಮತ್ತು ತನ್ನ ಬದ್ಧತೆಯನ್ನು ಘೋಷಿಸುವುದು."

**3. 26ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 26ನೇ ನಿಯಮದಲ್ಲಿ, (6)ನೇ ಉಪ-ನಿಯಮದ ತರುವಾಯ ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"(7) ಕರ್ನಾಟಕದಲ್ಲಿ ಒಂದು ಸಂಸ್ಥೆಯಾಗಿ ಕರ್ನಾಟಕ ನವೋದ್ಯಮ ಮತ್ತು ತಂತ್ರಜ್ಞಾನ ಸೊಸೈಟಿ [KITS] ಯಲ್ಲಿ ನೋಂದಾಯಿಸಿದ ಸ್ಟಾರ್ಟ್‌ಅಪ್‌ಗಳಿಗೆ, ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ತಂತ್ರಜ್ಞಾನ ಉತ್ಪನ್ನಗಳು ಅಥವಾ ಸರಕುಗಳು ಅಥವಾ ಪರಿಹಾರಗಳನ್ನು ಸಂಗ್ರಹಿಸುವ ಅವಧಿಯಲ್ಲಿ ಮುಂಗಡ ಹಣ ಠೇವಣಿ ಸಂದಾಯ ಮಾಡುವುದರಿಂದ ವಿನಾಯಿತಿ ನೀಡತಕ್ಕದ್ದು."

**4. 27ನೇ ನಿಯಮದ ತಿದ್ದುಪಡಿ.-** ಸದರಿ ನಿಯಮಗಳ 27ನೇ ನಿಯಮದಲ್ಲಿ, ಮೊದಲನೆ ಪರಂತುಕದ ತರುವಾಯ, (2)ನೇ ಉಪ-ನಿಯಮದಲ್ಲಿ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಈ ನಿಯಮಗಳಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದಾಗ್ಯೂ, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ, ತಂತ್ರಜ್ಞಾನ ಸರಕುಗಳು ಅಥವಾ ಉತ್ಪನ್ನಗಳು ಅಥವಾ ಪರಿಹಾರಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ನೋಂದಾಯಿತವಾದ ಮತ್ತು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಪಟ್ಟಿಯಲ್ಲಿ ಸೇರಿಸಿದ್ದು, ಪೂರ್ವಾರ್ಹತೆ ಪಡೆದ ಸ್ಟಾರ್ಟ್‌ಅಪ್‌ಗಳ ಪಟ್ಟಿಯನ್ನು ಅಂಗೀಕರಿಸಬಹುದು, ಎಂದರೆ:-

(i) ಕರ್ನಾಟಕ ಸ್ಟಾರ್ಟ್‌ಅಪ್ ನೀತಿಯಲ್ಲಿ ಪರಿಭಾಷಿಸಲಾದಂತೆ ಸ್ಟಾರ್ಟ್‌ಅಪ್‌ಗಳನ್ನು, ಕರ್ನಾಟಕದಲ್ಲಿ ಒಂದು ಸಂಸ್ಥೆಯಾಗಿ ಕರ್ನಾಟಕ ನವೋದ್ಯಮ ಮತ್ತು ತಂತ್ರಜ್ಞಾನ ಸೊಸೈಟಿ [KITS] ಯಲ್ಲಿ ನೋಂದಾಯಿಸತಕ್ಕದ್ದು;

(ii) ನ್ಯಾಯ ಸಮ್ಮತ, ಪಾರದರ್ಶಕ ಮತ್ತು ಸಮಂಜಸವಾದ ಪ್ರಕ್ರಿಯೆಯಲ್ಲಿ ಮತ್ತು ಯುಕ್ತ ಪ್ರಚಾರವನ್ನು ನೀಡಿ, ಪಟ್ಟಿಗೆ ಸೇರಿಸುವುದಕ್ಕಾಗಿ ಪೂರ್ವಾರ್ಹತೆಯನ್ನು ಈ ನಿಯಮಗಳಿಗೆ ಅನುಸಾರವಾಗಿ ಮಾಡತಕ್ಕದ್ದು;

(iii) ಅರ್ಹತೆಯ ರುಜುವಾತು ಪತ್ರಗಳು, ಅರ್ಹತೆ, ಸಾಮರ್ಥ್ಯ, ಕಾರ್ಯನಿರ್ವಹಣೆ, ಗುಣಮಟ್ಟ ನಿಯಂತ್ರಣ ವ್ಯವಸ್ಥೆಗಳು, ಆಂತರಿಕ ಆರ್ಥಿಕ ನಿಯಂತ್ರಣಗಳು, ಆರ್ಥಿಕ ಹಿನ್ನೆಲೆ ಮತ್ತು ಇತರೆ ಅರ್ಹತೆಯ ಅಗತ್ಯತೆಗಳನ್ನು ನೋಂದಣಿಗೆ ಮತ್ತು ಪಟ್ಟಿಗೆ ಸೇರಿಸುವ ಮುಂಚೆ ಎಚ್ಚರಿಕೆಯಿಂದ ಪರಿಶೀಲಿಸತಕ್ಕದ್ದು;

(iv) ಪಟ್ಟಿಗೆ ಸೇರಿಸುವುದಕ್ಕಾಗಿ ಪೂರ್ವಾರ್ಹತೆ ಪ್ರಕ್ರಿಯೆಯನ್ನು, ಸರ್ಕಾರದ ಮೂಲಕ ರಚಿಸಬಹುದಾದ ಒಂದು ಸಮಿತಿಯ ಮೂಲಕ ಪ್ರತಿವರ್ಷ ಮಾಡತಕ್ಕದ್ದು ಮತ್ತು ಪಟ್ಟಿಗೆ ಸೇರಿಸುವ ಪ್ರಕ್ರಿಯೆಯು ಪಟ್ಟಿಗೆ ಸೇರಿಸಲ್ಪಟ್ಟ ದಿನಾಂಕದಿಂದ ಮೂರು ವರ್ಷಗಳವರೆಗೆ ಸಿಂಧುವಾಗಿರತಕ್ಕದ್ದು;

(v) ನೋಂದಾಯಿಸಲ್ಪಟ್ಟ ಮತ್ತು ಪಟ್ಟಿಗೆ ಸೇರಿಸಲಾದ ಸ್ಟಾರ್ಟ್‌ಅಪ್‌ಗಳು ನೋಂದಣಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲವಾಗಿದ್ದಲ್ಲಿ, ಅಗತ್ಯಪಡಿಸಲಾದ ತಪಶೀಲು ಪಟ್ಟಿಗಳ ಅನುಸಾರವಾಗಿ ಮತ್ತು ಸಕಾಲದಲ್ಲಿ ಗುಣಮಟ್ಟವನ್ನು ಪೂರೈಸಿ ಸರಕುಗಳು ಮತ್ತು ಸೇವೆಗಳನ್ನು ಸರಬರಾಜು ಮಾಡಲು ವಿಫಲವಾಗಿದ್ದಲ್ಲಿ ಮತ್ತು ಯಾವುದೇ ಭ್ರಷ್ಟಾಚಾರ ಮತ್ತು ಮೋಸದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ ಮತ್ತು ಅಧಿನಿಯಮದ ಉದ್ದೇಶಗಳಿಗೆ ವಿರುದ್ಧವಾದ ಮತ್ತು ಸಾರ್ವಜನಿಕ ಹಿತಾಸಕ್ತಿಯಿಲ್ಲದ ಯಾವುದೇ ಕಾರಣದಿಂದ ಅವುಗಳನ್ನು ಯಾವುದೇ ಸಮಯದಲ್ಲಿ ತೆಗೆದುಹಾಕಬಹುದು ಅಥವಾ ನಿಷೇಧಿಸಬಹುದು;

(vi) ಪಟ್ಟಿಗೆ ಸೇರಿಸಲ್ಪಟ್ಟ ಸ್ಟಾರ್ಟ್‌ಅಪ್‌ಗಳ ಪಟ್ಟಿಯನ್ನು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿಯೂ ಸಹ ಪ್ರಕಟಿಸತಕ್ಕದ್ದು;

(vii) ಈ ಉಪಬಂಧದ ಮೇರೆಗಿನ ಯಾವುದೇ ಸಂಗ್ರಹಣೆಯು ಐವತ್ತು ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ ಮತ್ತು ಸಂಗ್ರಹಣೆ ಸಂಸ್ಥೆಯ ಮೂಲಕ ಒಂದು ನಿರ್ದಿಷ್ಟ ಸ್ಟಾರ್ಟ್‌ಅಪ್‌ಗೆ ನೀಡಿದ ಕರಾರುಗಳ ಸಂಖ್ಯೆಯು ಎರಡು ಕರಾರುಗಳಿಗೆ ಮಿತಿಗೊಳಿಸತಕ್ಕದ್ದು ಮತ್ತು ವಿವಿಧ ಸಂಗ್ರಹಣಾ ಸಂಸ್ಥೆಗಳನ್ನು ಪ್ರತಿಯೊಂದು ಆರ್ಥಿಕ ವರ್ಷದಲ್ಲಿ ಐದು ಕರಾರುಗಳಿಗೆ ಮಿತಿಗೊಳಿಸತಕ್ಕದ್ದು;

(viii) ಆಪೇಕ್ಷಿತ ತಂತ್ರಜ್ಞಾನ ಉತ್ಪನ್ನ ಅಥವಾ ಸರಕುಗಳು ಅಥವಾ ಪರಿಹಾರಕ್ಕಾಗಿ, ಹಾಗೂ ಅದಕ್ಕೆ ಸಂಬಂಧಿಸಿದ ಮೌಲ್ಯಮಾಪನ ಮತ್ತು ಅಂಗೀಕಾರ ಅಥವಾ ನಿರಾಕರಣೆಗಾಗಿ ಆರ್ಥಿಕ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕ್ರಿಯೆಯನ್ನು, ಈ ನಿಯಮಗಳ ಅನುಸಾರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾಡತಕ್ಕದ್ದು; ಮತ್ತು

(ix) ಈ ಉಪಬಂಧದ ಮೇರೆಗೆ ಸಂಗ್ರಹಣೆಯನ್ನು, ಸಾರ್ವಜನಿಕ ಸುರಕ್ಷತೆ, ಆರೋಗ್ಯ, ವಿಮರ್ಶಾತ್ಮಕ ಸಮೀಕ್ಷೆಯ ಕಾರ್ಯಾಚರಣೆಗಳು ಮತ್ತು ಸಾಧನ ಸಾಮಾಗ್ರಿಗಳು ಮೊದಲಾದವುಗಳನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹಣೆ ಸಂಸ್ಥೆಯು ಪರಿಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಕೃಷ್ಣ ಎನ್ ಬುಗಟ್ಯಾಗೋಳ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಜಂಟಿಕಾರ್ಯದರ್ಶಿ
ಆರ್ಥಿಕ ಇಲಾಖೆ (ಝಡ್.ಪಿ)